ಇದ್ದ ಪವಿತ್ರಾ ಪ್ಯಾರಡೈಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸಿದಾಗ 'ಬಿ.ಪಿ. ಎಲ್ಲ ನಾರ್ಮಲ್ ಇದೆ, ರಾತ್ರಿ ಸರಿಯಾಗಿ ನಿದ್ದೆಯಿಲ್ಲದ ಕಾರಣ ಸುಸ್ತು ಅನಿಸಿದೆ. ಏನೂ ತೊಂದರೆಯಿಲ್ಲ' ಅಂತ ಅಸಿಡಿಟಿಗೆ ಮಾತ್ರೆ ಕೊಟ್ಟು ಕಳಿಸಿದರಂತೆ. ಮತ್ತೆ ಮಧ್ಯಾಹ್ನ ಸುಸ್ತು ಅನಿಸಿ, ಒಮ್ಮೆ ವಾಂತಿ ಮಾಡಿದರಂತೆ. ಈ ಸಲ ದೊಡ್ಡಾಸ್ಪತ್ರೆಗೆ ಕರೆದುಕೊಂಡು ಹೋದರಂತೆ. ಇಸಿಜಿ ಮಾಡಿಸಲೆಂದು ಒಳಗೆ ಕರೆದುಕೊಂಡು ಹೋದವರು ಅರ್ಧಗಂಟೆ ನಂತರ ಹೊರಬಂದು 'ಸಾರಿ, ಉಳಿಸಿಕೊಳ್ಳಲು ಆಗಲಿಲ್ಲ' ಅಂದರಂತೆ. ವಾಸುದೇವಯ್ಯ ಮಾತಾಡುತ್ತಲೇ ಒಳಹೋದವರು ಮಾತು ನಿಲ್ಲಿಸಿ ಹೊರಬಂದರು ಎಂಬ ಮಾತೇ ಶ್ರೀರಾಮೇಗೌಡರಿಗೆ ಎದೆಗೆ ಚುಚ್ಚಿದಂತಾಗುತ್ತದೆ. ಆ ಕೊನೆಯ ಚಿತ್ರವೇ ಮತ್ತೆಮತ್ತೆ ಅವರ ಕಣ್ಣು ಮುಂದೆ ಬರುತ್ತದೆ. ಆಗ ಮೂಗು ಬಾಯಿ ಮುಚ್ಚಿ ಹಿಡಿದ ಸ್ಥಿತಿ!

ಶ್ರೀರಾಮೇಗೌಡರು ತಾವು ನಡೆಯುತ್ತಿದ್ದ ಪಾತ್ ಉದ್ದಕ್ಕೂ ನೋಟ ಹರಿಸಿದರು. ಎರಡೂ ಬದಿಯಲ್ಲಿ ಹಸಿರು ಚೈತನ್ಯದಿಂದ ಕೂಡಿರುತ್ತಿದ್ದ ಪಾತ್ ಹಾಳು ಬಿದ್ದಂತೆ ಅನಿಸತೊಡಗಿತು. ಸಹಪಾಠಿಯನ್ನು ಇದ್ದಕ್ಕಿದ್ದಂತೆ ಕಳಕೊಂಡ ದುಃಖವೋ, ತನ್ನ ಸರದಿ ಎಂದೋ ಎಂತೋ ಅನ್ನುವ ಭಯವೋ, ಒಡನಾಡಿ ಬಿಟ್ಟುಹೋದ ಒಂಟಿತನವೋ – ಶ್ರೀರಾಮೇಗೌಡರು ಬೆನ್ನು ಹಿಂದೆಯೇ ಅಂಟಿ ಬರುವ ಸಾವನ್ನು ಒಮ್ಮೊಮ್ಮೆ ಊಹಿಸಿ ಅಧೀರರಾಗಿ ಬಿಡುತ್ತಿದ್ದರು.

ಹೀಗಾಗಿ ಒಂದು ಸುತ್ತಿಗೆ ವಾಕಿಂಗ್ ಬೇಡವಾಗಿ ಕಲ್ಲುಬೆಂಚಿನ ಮೇಲೆ ಬಂದು ಕೂತಿದ್ದರು. ಆಗ ದೂಳೆಬ್ಬಿಸಿ ಬಿಟ್ಟು ಹೋದ ಗಾಳಿ ಈಗ ಸದ್ದಡಗಿಸಿಕೊಳ್ಳುತ್ತಿತ್ತು. ಹೆಪ್ಪೆಪ್ಪಾಗೆದ್ದು ಮುಸುಕಿಕೊಂಡಿದ್ದ ಮೋಡಗಳು ಸರಿಯತೊಡಗಿದ್ದವು; ಕೆಲವು ಕರಗಿ ಹೋಗಿದ್ದವು. ಈ ಬಿರುಗಾಳಿಗೆ ಮಳೆ ತರಲಾಗಲಿಲ್ಲ; ಮುಂದೆ ಸಾಗಿಹೋಗುತ್ತಿದ್ದ ಮೋಡಗಳನ್ನು ತಡೆದು ನಿಲ್ಲಿಸಲಾಗಲಿಲ್ಲ. ಶಬ್ದದ ಹಿಂದಿನ ನಿಶ್ಯಬ್ದದಂತೆ ಈಗ ಎಲ್ಲವೂ ನಿಸ್ತೇಜವಾಗಿತ್ತು.



ಜೋರುಗಾಳಿ, ಮಳೆ ತರುವುದಿಲ್ಲ ಅಂತ ಅಪ್ಪ ಹೇಳುತ್ತಿದ್ದ ಮಾತನ್ನು ನಚ್ಚಿ ಕೂತಂತಿದ್ದ ಶ್ರೀರಾಮೇಗೌಡರು ಪಾತ್‌ನತ್ತ ಮತ್ತೆ ಕಣ್ಣಾಡಿಸಿದರು. ಅವರಿಗೀಗ ತಮ್ಮ ನೆತ್ತಿ ಮೇಲೊಂದು ಎಲೆಚಿಗುರು ಅಂಟಿರುವುದು ಅರಿವಿಗೆ ಬಂತು. ಅದನ್ನು ಎತ್ತಿಕೊಂಡರು. ಆ ತುಂಡುಎಲೆ ಹಸಿರಾಗಿ ನಳನಳಿಸುತ್ತಿತ್ತು. ಅದನ್ನು ಹಿಡಿದುಕೊಂಡು ಹಿಂದು ಮುಂದು ತಿರುಗಿಸಿದರು. ಅದು ಕೈತಪ್ಪಿ ಕೆಳಬಿತ್ತು. ಕಲ್ಲುಬೆಂಚಿನ ಮೇಲೆ ಇನ್ನೂ ನಾಕೈದು ಹಸಿರು ಎಲೆ ತುಂಡುಗಳು ಬಿದ್ದಿದ್ದವು. ಹಾಗೆಯೇ, ಅಷ್ಟೇಅಲ್ಲ ತಾವು ತಿರುಗಾಡುವ ಪಾತ್‌ನುದ್ದಕ್ಕೂ ಎಲೆಗಳು ಬಿದ್ದಿದ್ದವು. ಕೊಂಬೆ ತುದಿಗಳಲ್ಲಿ ನಲಿದಾಡುತ್ತಿರಬೇಕಾದ ಎಳಸು ಎಲೆಗಳವು ಗಾಳಿಯ ರಭಸಕ್ಕೆ ಮೂಲ ಕಳಕೊಂಡು ಚೆಲ್ಲಾಡಿ ಹೋಗಿದ್ದವು. ಶ್ರೀರಾಮೇಗೌಡರಿಗೆ ಅಲ್ಲಿ ಕೂರಲು ಸ್ವಸ್ಥವಾಗಲಿಲ್ಲ.

ಶ್ರೀರಾಮೇಗೌಡರು ಎದ್ದರು. ಅದಾಗಲೇ ಮಳೆ-ಮೋಡಗಳ ಮಬ್ಬು ಕರಗಿ ಸಂಜೆಯ ತಿಳಿಬೆಳಕು ಹರಡಿತ್ತು. ಇತ್ತ ಸಂಜೆ ಪಾಳಿಯ ವಾಕಿಂಗ್ ಜನರ ಸುಳಿವಿರಲಿಲ್ಲ. ಆರ್ಭಟಿಸಿ ಆವರಿಸಿಕೊಂಡಿದ್ದ ಮಳೆಗಾಳಿಗೆ ಹೆದರಿ ಅವರು ಹೊರ ಬಂದಿರಲಿಲ್ಲ. ಕುಣಿದು ಕುಪ್ಪಳಿಸುತ್ತಿದ್ದ ಆಟದ ಮಕ್ಕಳ ಸುಳಿವೂ ಇರಲಿಲ್ಲ. ಮಾಮೂಲಿನಂತೆ ಅಲ್ಲೊಂದು ಇಲ್ಲೊಂದು ಬೀದಿನಾಯಿಗಳು ಅಳುಕು ಅಂಜಿಕೆಯಿಲ್ಲದೆ ಅಡ್ಡಾಡುತ್ತಿದ್ದವು.

ಯಾಕೋ ಸಾಕು ಅನಿಸಿದ್ದ ಶ್ರೀರಾಮೇಗೌಡರಿಗೆ ಈಗ ಇನ್ನೊಂದು ಸುತ್ತು ವಾಕಿಂಗ್ ಮಾಡಬಹುದೇ ಅನಿಸಿತು. ಅನಿಸಿದಂತೆಯೇ ಹೆಜ್ಜೆಯೂರ ತೊಡಗಿದರು. ಮುಂದೆ ಮುಂದೆ ನಡೆದಂತೆಲ್ಲ ಪಾತ್ ಮೇಲೆ ಬಿದ್ದಿದ್ದ ಕಡ್ಡಿಕಸ ಅವರ ಕಾಲಿಗೆ ಸಿಗುತ್ತಿದ್ದವು. ಒಂದು ಕಡ್ಡಿ ಕಾಲಿಗೆ ಅಡ್ಡವಾಯಿತು. ಅದನ್ನು ತೆಗೆದು ಎಸೆಯಲು ನೋಡಿದರು. ಹಾಗೆ ಮಾಡಲು ಮನಸ್ಸು ಬಾರದೆ ಕಡ್ಡಿಯನ್ನು ಕಾಲಿನಿಂದ ಸರಿಸಿ ಮುಂದೆ ಬಂದರು. ಆದರೆ ಇದೇ ಜಾಗದಲ್ಲಿ ಹಿಂದೊಮ್ಮೆ ತಮ್ಮ ಪ್ಯಾಂಟಿಗೆ ಕಚ್ಚಿಕೊಂಡಿದ್ದ ಕಡ್ಡಿಯನ್ನು ಕಿತ್ತೆಸೆದ ಹುಡುಗಿ ಈಗ ನೆನಪಾದಳು. ಇದು ಕಾರಣ ಅವರ ಮನಸ್ಸೀಗ ಚುರುಕಾಗತೊಡಗಿತು.

ಅವತ್ತು ತಾವು ಮತ್ತು ವಾಸುದೇವಯ್ಯ